# ನಮ್ಮ ದೇಶ ಭಾರತ

## ಪೀಠಿಕೆ :

ನಮ್ಮ ದೇಶ ಭಾರತ. ನಾವು ಭಾರತೀಯರು. ಇದೊಂದು ಉಪಖಂಡವೂ ಅಹುದು. ಮೂರು ಕಡೆ ಸಮುದ್ರ, ಒಂದು ಕಡೆ ಮಹಾಪರ್ವತ ಇದೆ. ಅದುವೇ ಹಿಮಾಲಯ.

## ವಿಷಯ ವಿವರಣೆ :

ಈ ದೇಶವನ್ನು 'ಭರತ ಖಂಡ', 'ಹಿಂದೂಸ್ಥಾನ', 'ಇಂಡಿಯಾ' ಎಂದು ಕರೆಯುವರು. ನಮ್ಮ ದೇಶದ ವಿಸ್ತಾರ ೩೨,೮೭,೨೬೩ ಚದರ ಕಿಲೋಮೀಟರ್‌ಗಳು. ಇದು ಕಾಶ್ಮೀರದಿಂದ ಕನ್ಯಾಕುಮಾರಿ, ಪಂಜಾಬದಿಂದ ಮಣಿಪುರದವರೆಗೆ ಹಬ್ಬಿದೆ.

ಇಲ್ಲಿ ಹಿಂದೂ, ಮುಸ್ಲಿಂ, ಸಿಖ್, ಕ್ರೈಸ್ತ, ಬೌದ್ಧ, ಜೈನ ಮುಂತಾದ ಮತದವರೂ ಇದ್ದಾರೆ. ಬಹುಧರ್ಮ, ಬಹುಭಾಷೆ, ಬಹುವೇಷ ಹೊಂದಿರುವ ದೊಡ್ಡದೇಶ ನಮ್ಮದು. ಈ ಜನ ಶಾಂತಿಪ್ರಿಯರು. ವಿಶಾಲ ಮನೋಭಾವದವರು. ಜಾತಿ–ಮತ–ಭಾಷೆ ಮೀರಿದವರು.

ಈ ದೇಶದಲ್ಲಿ ಗಂಗಾ, ಯಮುನಾ, ಸಿಂಧೂ, ಕಾವೇರಿ, ಕೃಷ್ಣೆ, ಗೋದಾವರಿ ಮುಂತಾದ ನದಿಗಳು ಹರಿಯುತ್ತಿವೆ. ಬದುಕಿನ ಭೂಮಿಗೆ ನೀರುಣಿಸುತ್ತಿವೆ. ಕರಾವಳಿಯು ಸಾಗರದ ಚೆಲುವಿನಿಂದ ತುಂಬಿದೆ. ದಕ್ಷಿಣಪೀಠಭೂಮಿ ಫಲವತ್ತಾದ ನಾಡು. ಅದನ್ನು ಪಶ್ಚಿಮ ಘಟ್ಟಗಳು, ಪೂರ್ವಘಟ್ಟಗಳು ಸುತ್ತುವರಿದಿವೆ. ಇದು ಹಚ್ಚಹಸಿರಿನ ಕಾಡು. ಇಲ್ಲಿ ಹುಲಿ, ಸಿಂಹ, ಆನೆ, ಜಿಂಕೆ, ಚಿರತೆ ಮುಂತಾದ ವನ್ಯಜೀವಿಗಳು ಇವ

'ಜನಗಣಮನ' ಇದು ನಮ್ಮ ರಾಷ್ಟ್ರಗೀತೆ. ನಮ್ಮ ದೇಶದ ಬಾವುಟ ಮೂರು ಬಣ್ಣಗಳಿಂದ ಕೂಡಿದೆ. 'ಕೇಸರಿ' ತ್ಯಾಗದ ಸಂಕೇತ. 'ಬಿಳಿ' ಶಾಂತಿಯ ಪ್ರತೀಕ ಮತ್ತು 'ಹಸಿರು' ಸಮೃದ್ಧಿಯ ಸೂಚಕ. ನಡುವೆ ಇರುವ 'ನೀಲಿ' ಬಣ್ಣದ ಚಕ್ರ ನಮ್ಮ ಧರ್ಮಚಕ್ರ, ಪ್ರಗತಿಯ ಸಂಕೇತ. ಇದುವೆ ನಮ್ಮ ಹೆಮ್ಮೆಯ ಬಾವುಟ.

**ಉಪಸಂಹಾರ:** ಬುದ್ಧ, ಬಸವ, ಅಲ್ಲಮ, ಗಾಂಧಿ, ಅಂಬೇಡ್ಕರ್ ಮೊದಲಾದ ಮಹಾತ್ಮರ ನಾಡಿದು. ವಿವೇಕಾನಂದ, ಅರವಿಂದರ ಗೂಡಿದು. ಈ ನಾಡಿನ ರೈತ, ಈ ನಾಡಿನ ಸೈನಿಕ ನಮ್ಮ ದೇಶದ ಆಧಾರ ಸ್ತಂಭಗಳು.